# ನಳಿನಜಾಂಡ ತಲೆಯದೂಗಿ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 106.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 312.
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 159.
4. **Note:** Lyrics mentioned in yellow highlights are as per Ref. 1 and the lyrics given without highlights are as per Ref. 2. The wordings in Ref. 3 are almost same as in Ref. 2.
5. **Note:** Singer has followed lyrics as in Ref. 2 (given without highlights).

ರಾಗ: ಶಂಕರಾಭರಣ ತಾಳ: ಅಟ

ನಳಿನಜಾಂಡ ತಲೆಯದೂಗಿ ಮೋಹಿಸುತಿರಲು
ಕೊಳಲನೂದಿ ಬಾಜಿಸುವ ಚೆಲುವ ಕೃಷ್ಣ ರಾಯನ ನೋಡಿ || ಪ ||

ಹೊಳೆವ ಹೊಂಬಣ್ಣ ದಟ್ಟಿ ಚಲ್ಲಣ ಅಳವಡಿಸಿದ ನೀಲಿಯ ಬಿಗಿದು
ಹಲವು ರನ್ನದ ಉಂಗುರನಿಟ್ಟ ಚೆಲುವ ಬೆರಳ ನಟಿಸುತ
ಲಲಿತ ವಾಮ ತೋಳಿನ ಮೇಲೆ ಹೊಳೆವ ವಾರೆದೃಷ್ಟಿ ಎಸೆಯೆ
ಬಲದ ಪಾದ ಎಡಕೆ ಚಾಚಿರೆ ಜಲಜದಂದದಿ ಹೊಳೆಯಲು ನೋಡಿ || 1 ||

ಗುಲಗಂಜಿ ಸರ ಕಲ್ಲಿಯ ಚಿಕ್ಕ ಗಜಗಿನ ಚೀಲ ಶಳೆ ಗೋಲಾಮಚಿ
ಘಲ್ಲುಕೆಂಬಾ ಪೆಂಡೆ ಘಮ್ಮ ಘಮ್ಮಿಸುವ ಮಲಯಜಾಮಿತ ಲೇಪಿತ
ಮಲ್ಲಿಗೆ ಮಾಲತಿ ಬಳ್ಳಿಯ ದಳಿಲು ಹಲವು ಸರಗಳೊಲಿವುತಿರಲು
ತಳಿತ ಕಲ್ಪವೃಕ್ಷದ ನೆಳಲೊಳು ಗೆಳೆಯ ಗೋವರಿಂದಾಡಲು || 2 ||

ಮಾರವ ದೇಶಿ ಗುರ್ಜರಿ ಭೈರವಿ ಗೌಳಿ ನಾಟಿ ಸಾವೇರಿ ಆಹೇರಿ
ಪೂರ್ವಿ ಕಾಂಬೋದಿ ಪಾಡಿ ದೇಶಾಕ್ಷಿ ಶಂಕರಾಭರಣ ಮಾಳವಿ
ವರಾಳಿ ಕಲ್ಯಾಣಿ ತೋಡಿ ಮುಖಾರಿ ಯರಳಿ ವಸಂತ ಬೌಳಿ ಧನ್ಯಶ್ರೀ

ಸೌರಾಷ್ಟ್ರ ಗುಂಡಕ್ರಿಯ ರಾಮಕ್ರಿಯ ಮೇಘ ಕುರಂಜಿಯು ಪಾಡಲು ನೋಡಿ || 3 ||

ಹರುಷದಿಂದ ವನದಿ ಸುವಾರವ ಪುರದ ಸತಿಯರೆಲ್ಲರು ಕೇಳಿ
ಮರೆದು ಮನೆಯ, ಮಕ್ಕಳ ಜರೆದು , ನೆರೆದು ಹರಿಯ ಒಲಿಸುತ
ಹರಿಣ ಕರಿಯು ಕೇಸರಿ ವೃಂದ ತುರಗ ಮಹಿಷ ಉರಗ ಮೂಷಕ
ಹರಿಯ ಕೊಳಲ ರವಕೆ ಮೋಹಿಸಿ ಮರೆದಿರೆ ಜಾತಿ ವೈರವ || 4 ||

ಕರಗಿ ಕಲ್ಲು ನೀರಾಗಿ ಹರಿಯೆ ತೆರೆಗಳಿಂದುಕ್ಕಿ ಹರಿಯೆ ಯಮುನೆ
ತುರು ಖಗ ಬರ್ಹಿ ಸ್ತ್ರೀಯರು ಚಿತ್ರದಿ ಬರೆದ ಪ್ರತಿಮೆಯಂತಿರೆ
ಸುರರು ನಭದಿ ನೋಡಿ ಕುಸುಮಗರೆಯೆ ಭೇರಿ ದುಂದುಭಿ ಮೊರೆಯೆ
ಪುರಂದರ ವಿಠಲ ಗೋಕುಲದಿ ವೇಣುನಾದ ಮಾಡಲು ನೋಡಿ || 5 ||

**Note:** Given below are the lyrics as in Ref. 1 and are given in yellow highlights.

ರಾಗ: ಶಂಕರಾಭರಣ ತಾಳ: ರೂಪಕ

ನಳಿನಜಾಂಡ ತಲೆಯದೂಗೆ
ಇಳೆಯು ನಲಿದು ಮೋಹಿಸುತಿರಲು
ಕೊಳಲ ಪಿಡಿದು ಬಾರಿಸಿದನು
ಚೆಲುವ ಕೃಷ್ಣ ರಾಯನು || ಪ ||

ಪೊಳೆವ ಪೊಂಬಟ್ಟೆಯ ದಟ್ಟಿ
ಅಳವಡಿಸಿ ನೆಗಹಿ ನಿಂದ
ಹಲವು ರನ್ನದ ಉಂಗುರವಿಟ್ಟ
ಚೆಲುವ ಬೆರಳ ನಟಿಸುತ
ಲಲಿತ ವಾಮಭಾಗ ತೋಳ-
ಲೊಲಿದು ಒರೆ ನೋಟದಿಂದ
ಬಲದ ಪಾದ ಎಡಕೆ ಚಾಚೆ
ನಳಿನ ಪದಗಳೊಪ್ಪುತಿರಲು || ೧ ||

ಸೆಳೆ ನಡುವಿನೊಳಗೆ ಕತ್ತರಿ
ಕಳೆಯಸಂಚಿ ಗಜುಗು ಚೀಲ

ಬಿಳಿಯ ಮಣಿಯು ಗುಳ್ಳೆಗಳಿರಲು
ಮಲಯ ಜಾನು ಲೇಪನ
ಜಲಜ ನೇತ್ರ ಕೌಸ್ತುಭಾದಿ-
ಗಳದಿ ಸ್ವರಗಳೊಪ್ಪುತಿರಲು
ಲಲಿತವೇಣು ಕಲ್ಪನೆಯಲಿ ಗೋ-
ವಳರೆಲ್ಲರು ಕುಣಿಯಲು || ೨ ||

ಮಾರವಿ ದೇಶಿ ಗುರ್ಜರಿ ಭೈರವಿ
ಗೌಳಿ ನಾಟಿ ಸಾವೇರಿ ಆಹೇರಿ
ಪೂರ್ವಿ ಕಾಂಬೋದಿ ಪಾಡಿ ದೇಶಾಕ್ಷಿ ಶಂ-
ಕರಾಭರಣ ರಾಗದಿ
ಪೂರ್ವಿ-ಕಲ್ಯಾಣಿ ವಸಂತ ತೋಡಿ
ವರಾಳಿ ಗುಂಡಕ್ರಿ ಸಾರಂಗ ಸಾಳಗ
……………………………………
ಸೋರಟ ಭೂಪಾಳಿ ಶ್ರೀರಾಗದಿಂದಲಿ || ೩ ||

ಹರುಷದಿ ಬಾರಿಸುವ ರವಕೆ
ಪುರದ ಸ್ತ್ರೀಜನರು ಎಲ್ಲ
ಮರೆದು ಮಕ್ಕಳ ಮನೆಯ ಕೆಲಸ
ಮರೆದು ಹರಿಯ ಬಳಸಲು
ಕರಿಯು ಮೃಗವು ಕೇಸರಿ ಶರಭ
ಹರಿಣ ನವಿಲು ಉರಗ ಮೋಹಿಸಿ
ನರೆದು ಮರೆದು ಜಾತಿ ವೈರವ
ಸ್ವರವ ಕೇಳುತಿರಲು || ೪ ||

ಕರೆಗೆ ಗಿರಿಯ ಕಲ್ಲು ತುರಗ-
ಳೆರಗಿ ಪಕ್ಷಿ ತತಿಗಳಿರಲು
ಸುರರು ಸುಮನ ಸುರಿಯುತಿರಲು
ಧರೆಯು ಮುದದಿ ಕುಣಿಯುತಿರಲು
ಶರಧಿ ಉಕ್ಕಿ ಸರಿತು ಸೊಕ್ಕಿ
ಪುರರಿಪು ವಿಧಿ ಪೊಗಳುತಿರಲು
ವಿರಚಿಸಿದ ಪುರಂದರ ವಿಠ್ಠಲ

ಮುರಳಿ ಗಾನ ಮಾಡಿದ    ॥ ೫ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ನಳಿನಜಾಂಡ** – ಬ್ರಹ್ಮಾಂಡವು.

**ದಟ್ಟಿ** – ಸೊಂಟಕ್ಕೆ ಸುತ್ತುವ ಬಟ್ಟೆ.

**ಚಲ್ಲಣ** – ತೊಡೆ ಮುಚ್ಚುವ ಚಡ್ಡಿ; ಅರ್ಧೋರುಕ.

**ನೀಲಿ** – ನೈದಿಲೆ, ಕುಮುದ, ನೀಲೋತ್ಪಲ; ನವಿಲುಗರಿ ಸಿಕ್ಕಿಸಿ ಅಥವಾ ನೀಲವಸ್ತ್ರವನ್ನು ಅಡ್ಡ ಬಿಗಿದು.

**ಕಲ್ಲಿ** – ಹೆಣಿಗೆಯ ಚೀಲ, ಬಲೆಚೀಲ.

**ಶಳೆ** – ಸಣ್ಣ ಕೋಲು.

**ಗೋಲಾಮಚಿ** – ಕೆಂಪು ಹರಳಿನ ಒಡವೆ.

**ಜಲಜದಂದದಿ** – ತಾವರೆ ಹೂವಿನಂತೆ.

**ಪೆಂಡೆ** – ಕಾಲುಬಳೆ (ಪಾಯವಟ್ಟ).

**ಮಲಯಜಾಮಿತ ಲೇಪಿತ** – ಮಲಯ ಮಾರುತದಿಂದ ಹೆಚ್ಚಾಗಿ ಸುವಾಸನೆಯನ್ನು ಬೀರುತ್ತ.

**ಹರಿಣ ಕರಿ ಕೇಸರಿ ವೃಂದ ತುರಗ ಮಹಿಷ ಉರಗ ಮೂಷಕ** – ಜಿಂಕೆ, ಆನೆ, ಸಿಂಹಗಳ ತಂಡ, ಕುದುರೆ, ಎಮ್ಮೆ, ಹಾವು, ಇಲಿ.

**ತುರು ಖಗ ಬರ್ಹಿ** – ಹಸುಗಳು, ಹಕ್ಕಿಗಳು, ನವಿಲು.

**ಬಾಜಿಗ** = ವಾದ್ಯಗಳನ್ನು ಬಾರಿಸುವವ, ಸಂಗೀತಗಾರ

**Classification:** Keerthane
**Ankita:** purandara vittala
**Location:** NA
**Category:** Krishna Leele

**Sub-Category:** brahmanda, bhumi, moha, kolalu, Krishna, ungura, abharana, kallu, mallige, kalpavruksha, mitra, govu, sangeetha, santosha, mana, patni, venu, makkalu, gaja, kudure, uraga, ili, emme, nadi, sura, akasha,
**Pravachana:** NA
**Explanation:** NA